ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru. These lyrics are given separately in green highlights. There are more stanzas here, page no. 42.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi. These lyrics are given separately without highlights, page no. 429.
3. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page no. 146. These lyrics are given separately in yellow highlights.
4. **Note:** Singer has followed the lyrics as in Ref. 2.

ರಾಗ: ಶಂಕರಾಭರಣ ತಾಳ: ಆದಿ

ಮಡಿ ಮಡಿ ಮಡಿಯೆಂದು ಅಡಿಗಡಿಗ್ ಹಾರುವೆ
ಮಡಿ ಮಾಡುವ ಬಗೆ ಬೇರುಂಟು || ಪ ||

ಪೊಡವಿ ಪಾಲಕನ ಪಾದ ಧ್ಯಾನವನು
ಬಿಡದೆ ಮಾಡುವುದದು ಮಡಿಯು || ಅಪ ||

ಬಟ್ಟೆಯ ನೀರೊಳಗದ್ದಿ ಒಣಗಿಸಿ
ಉಟ್ಟು ಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮ ಕ್ರೋಧ ಮದ ಮತ್ಸರ
ಬಿಟ್ಟು ನಡೆದರೆ ಅದು ಮಡಿಯು || 1 ||

ದಶಮಿ ದ್ವಾದಶಿ ಪುಣ್ಯ ದಿನದಲಿ
ವಸುದೇವ ಸುತನನು ಪೂಜಿಸದೆ
ದೋಷಕಂಜದೆ ಪರರನ್ನ ಭುಂಜಿಸಿ ಯಮ-
ಪಾಶಕೆ ಸಿಲುಕುವುದದು ಮಡಿಯೆ || 2 ||

ಹಸಿದು ಭೂಸುರರು ಮಧ್ಯಾಹ್ನ ಕಾಲಕೆ
ಕುಸಿದು ಮನೆಗೆ ಬಳಲುತ ಬಂದರೆ
ಮಸಣಿಗೊಂದು ಗತಿಯಿಲ್ಲವೆಂದು ತಾ
ಹಸನಾಗಿ ಉಂಬೋದು ಹೊಲೆ ಮಡಿಯು || 3 ||

ರಾಗ: ಬೇಹಾಗ್ ತಾಳ: ಆದಿ

ಮಡಿ ಮಡಿ ಮಡಿಯೆಂದು ಅಡಿಗಡಿಗ್ ಹಾರುತಿ
ಮಡಿ ಮಾಡುವ ಬಗೆ ಬೇರುಂಟು

ಪೊಡವಿ ಪಾಲಕನ ಪಾದ ಧ್ಯಾನವನು
ಬಿಡದೆ ಮಾಡುವುದು ಅದು ಮಡಿಯು

ಬಟ್ಟೆಯ ನೀರೊಳಗದ್ದಿ ಒಣಗಿಸಿ
ಉಟ್ಟು ಕೊಂಡರೆ ಅದು ಮಡಿಯಲ್ಲ
ಹೊಟ್ಟೆಯೊಳಗಿನ ಕಾಮ ಕ್ರೋಧವ
ಬಿಟ್ಟು ನಡೆದರೆ ಅದು ಮಡಿಯು

ಇಚ್ಛೆಯಿಂದ ಮಲ ಮೂತ್ರ ಶರೀರವ
ನೆಚ್ಚಿ ತೊಳೆಯಲು ಅದು ಮಡಿಯೆ
ಅಚ್ಯುತಾನಂತನ ನಾಮವ ನೆನೆದು
ಸಂಚಿತ ಕಳೆವುದು ಅದು ಮಡಿಯು

ಹಸಿದು ಭೂಸುರರು ಮಧ್ಯಾಹ್ನ ಕಾಲದಿ
ಕುಸಿದು ಮನೆಗೆ ಬಳಲುತ ಬರಲು
ಹುಸಿಯತನದಿ ಗತಿಯಿಲ್ಲವೆಂದು ತಾ
ಹಸನಾಗಿ ಉಂಬುವುದೆ ಹೊಲೆ ಮಡಿಯು

ಇಚ್ಛೆಯಿಂದ ಮಲ ಮೂತ್ರ ಶರೀರವ
ನೆಚ್ಚಿ ತೊಳೆಯಲು ಅದು ಮಡಿಯೆ
ಅಚ್ಯುತಾನಂತನ ನಾಮವ ನೆನೆದು
ಸಂಚಿತ ಕಳೆವುದು ಅದು ಮಡಿಯು ‖ 4 ‖

ದಶಮಿ ದ್ವಾದಶಿ ಪುಣ್ಯ ಕಾಲದಲಿ
ವಸುದೇವ ಸುತನನು ಪೂಜಿಸದೆ
ದೋಷಕಂಜದೆ ಪರರನ್ನವ ಭುಂಜಿಸಿ ಯಮ-
ಪಾಶಕೆ ಬೀಳ್ವುದು ಅದು ಮಡಿಯೇ

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕ್ತಿಯಲಿ
ಪರಿಪಾಲಿಸು ಎಂದು ಪುರಂದರ ವಿಠಲನ
ಇರುಳು ಹಗಲು ಸ್ಮರಿಸುವುದು ಮಡಿಯು ‖ 5 ‖

ಹಿರಿಯರ ಗುರುಗಳ ಹರಿದಾಸರುಗಳ
ಚರಣಕೆರಗಿ ಬಲು ಭಕ್ತಿಯಲಿ
ಪರಿಪಾಲಿಸು ಎಂದು ಪುರಂದರ ವಿಠಲನ
ಇರುಳು ಹಗಲು ನೆನೆವುದೆ ಮಡಿಯು

Note: As lyrics in book in Ref. 1 above are different, they are given separately here below in green highlights.

ರಾಗ: ಶಂಕರಾಭರಣ ತಾಳ: ಆದಿ

ಮಡಿ ಮಡಿ ಮಡಿಯೆಂದು ಅಡಿಗಡಿಗೆ ಹಾರುವೆ
ಮಡಿ ಮಾಡುವ ಬಗೆ ಬೇರುಂಟು ‖ ಪ ‖

ಪೊಡವಿ ಪಾಲಕನ ಧ್ಯಾನ ಮಾಡುವುದು
ಬಿಡದೆ ಭಜಿಸುವುದು ಅದು ಮಡಿಯೊ ‖ ಅಪ ‖

ಬಟ್ಟೆಯ ನೀರೊಳಗಿಟ್ಟು ಒಣಗಿಸಿ
ಉಟ್ಟರೆ ಅದು ತಾ ಮಡಿಯಲ್ಲ
ಹೊಟ್ಟೆಯೊಳಗಿನ ಕಾಮ ಕ್ರೋಧಗಳ
ಬಿಟ್ಟರೆ ಅದು ತಾ ಮಾಡಿಯೊ ‖ ೧ ‖

ಪರ ಧನ ಪರ ಸತಿ ಪರ ನಿಂದೆಗಳನು
ಜರೆದಹಂಕಾರಗಳನೆ ತೊರೆದು
ಹರಿ ಹರಿ ಎಂದು ದೃಢದಿ ಮನದಲಿ
ಇರುಳು ಹಗಲು ಸ್ಮರಿಸಲು ಮಾಡಿಯೊ ‖ ೨ ‖

ಎಚ್ಚರವಿಲ್ಲದೆ ಮಲ ಮೂತ್ರ ದೇಹವ
ನೆಚ್ಚಿ ಕೆಡಲು ಬೇಡೆಲೊ ಮನವೇ
ಅಚ್ಯುತಾನಂತನ ನಾಮವ ಮನಗೊಂಡು
ಸಚ್ಚಿನ್ಮೆಯಲಿರುವುದೆ ಮಡಿಯೊ ‖ ೩ ‖

ಭೂ ಸುರರು ಮಧ್ಯಾನ್ಹ ಕಾಲದಲಿ
ಹಸಿದು ಬಳಲಿ ಬಂದರೆ ಮನೆಗೆ
ಬೇಸತ್ತು ನಮಗೆ ಗತಿಯಿಲ್ಲ ಹೋಗೆಂದು
ಹಸನಾಗಿ ಉಂಬುವುದು ಅದು ಮಡಿಯೊ ? ॥ ೪ ॥

ದಶಮಿ ದ್ವಾದಶಿಯ ಪುಣ್ಯ ಕಾಲದಲಿ
ವಸುದೇವ ಸುತನ ಪೂಜಿಸದೆ
ದೋಷಕಂಜದೆ ಪರರನ್ನ ಭುಜಿಸಿ ಯಮ
ಪಾಶಕೆ ಬೀಳ್ವುದು ಹುಸಿ ಮಡಿಯೊ ! ॥ ೫ ॥

ಸ್ನಾನ ಸಂಧ್ಯಾನ ಮೊದಲಾದ ಕರ್ಮಗಳೆಲ್ಲ
ಜ್ಞಾನ ಮಾನ ಸುಮ್ಮಾನದಿಂದ
ದೀನ ವಂದ್ಯನ ಸುಜನ ಸಂತರ್ಪಣ
ಅನುದಿನ ಮಾಡುವುದು ಘನ ಮಡಿಯೊ ॥ ೬ ॥

ಗುರು ಹಿರಿಯರ ಹರಿದಾಸರ ನೆನೆದು
ಚರಣಕೆರಗಿ ಭಯ ಭಕ್ತಿಯಿಂದ
ಪರಿ ಪರಿ ವಿಧದಲಿ ಪುರಂದರ ವಿಠ್ಠಲನ
ನೆರೆ ನಂಬುವುದು ಉತ್ತಮ ಮಡಿಯೊ ॥ ೭ ॥

ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:

ನಿಜವಾದ ಮಾಡಿ ಯಾವುದು? ಅಭಾಸದ ಮಾಡಿ ಯಾವುದು? ಎಂಬುದನ್ನು ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ

ಪೊಡವಿ ಪಾಲಕ = ಶ್ರೀ ಹರಿ (ಭೂ ರಮಣ)

ಮಾನ = ಆದರ

ಸುಮ್ಮಾನ = ಸಂತೋಷ

ಸಂಚಿತ – ಕರ್ಮಗಳಲ್ಲಿ ಒಂದು ಬಗೆ; ಜನ್ಮಾಂತರಗಳಿಂದ ಅನುಸರಿಸಿ ಬಂದದ್ದು.

ಪುಣ್ಯ ಕಾಲದಲಿ – ಸಂಕ್ರಮಣ, ಗ್ರಹಣ ಇತ್ಯಾದಿ ಕಾಲಗಳಲ್ಲಿ.

Classification: Keerthane
Ankita: purandara vittala

Location: NA

Category: samsara chitragalu, Loka Neeti.

Sub-Category: madi, karma, achyuta, Ananta, yama, punya, Krishna, hagalu, irulu, deha, patni, rokka, Dhyana, ahankara, oota, puje, snana, jnana, punya, anna, bhumi, sura, mane, smarane, dina, kaadu, vastra,

Pravachana: NA

Explanation: NA